ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ: 19–08–2019

# ಪತ್ರಿಕಾ ಆಮಂತ್ರಣ

**1. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪ್ರಗತಿಪರ ಸಾಧನೆಗಳ ಸರದಾರ, ಸಾಮಾಜಿಕ ಪರಿವರ್ತನೆಯ ಹರಿಕಾರ ಡಿ. ದೇವರಾಜ ಅರಸು ಅವರ 104 ನೇ ಜನ್ಮ ದಿನಾಚರಣೆ ಅಂಗವಾಗಿ ಡಿ. ದೇವರಾಜ ಅರಸು ಅವರ ಪ್ರತಿಮೆಗೆ ಮಾಲಾರ್ಪಣೆ:**

**ಮಾಲಾರ್ಪಣೆ:**

ಬಿ.ಎಸ್. ಯಡಿಯೂರಪ್ಪ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ದಿನಾಂಕ: 20–08–2019, ಮಂಗಳವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ.
ಸ್ಥಳ: ವಿಧಾನಸೌಧದ ಪಶ್ಚಿಮದ್ವಾರದ ಮುಂಭಾಗ, ಬೆಂಗಳೂರು.

**2. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಹಾಗೂ ಕಲಾಮಂದಿರ, ಕಲಾಶಾಲೆ, ಹನುಮಂತನಗರ, ಬೆಂಗಳೂರು ಇವರ ಸಹಯೋಗದೊಂದಿಗೆ ರಾಜ್ಯಮಟ್ಟದ ಹಿರಿಯ ಕಲಾವಿದರ ಕಲಾಶಿಬಿರ:**

**ಉದ್ಘಾಟನೆ:**

ಚಿರಂಜೀವಿ ಸಿಂಗ್, ಅಧ್ಯಕ್ಷರು,
ಶತಮಾನೋತ್ಸವ ಸಮಿತಿ, ಕಲಾಮಂದಿರ

**ಮುಖ್ಯ ಅತಿಥಿಗಳು:**

ಪ್ರೊ. ಎಂ. ಜೆ. ಕಮಲಾಕ್ಷಿ,
ನಿಕಟಪೂರ್ವ ಅಧ್ಯಕ್ಷರು,
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

**ಅಧ್ಯಕ್ಷತೆ:**

ಆರ್.ಆರ್. ಜನ್ನು ಭಾ.ಆ.ಸೇ
ಕಾರ್ಯದರ್ಶಿಗಳು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಅಧ್ಯಕ್ಷರು,
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

**ಉಪಸ್ಥಿತಿ:**

ಡಾ. ಶೈಲಜಾ ಎ.ಸಿ.
ರಿಜಿಸ್ಟ್ರಾರ್,
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
ದಿನಾಂಕ: 20-08-2019, ಮಂಗಳವಾರ ಸಮಯ: ಬೆಳಿಗ್ಗೆ 11-00 ಗಂಟೆಗೆ.
ಸ್ಥಳ: ಡಿ.ವಿ.ಜಿ. ಆರ್ಟ್ ಗ್ಯಾಲರಿ, ಹನುಮಂತನಗರ, ಬೆಂಗಳೂರು

## ಪತ್ರಿಕಾ ಪ್ರಕಟಣೆ

## ಕೊಡಗಿನ ಸೈನಿಕ ಶಾಲೆಗೆ ಪ್ರವೇಶ

ಬೆಂಗಳೂರು, ಆಗಸ್ಟ್ 19 ( ಕರ್ನಾಟಕ ವಾರ್ತೆ ) :

ಕೊಡಗಿನ ಸೈನಿಕ ಶಾಲೆಸಯು ರಾಜ್ಯ ಸರ್ಕಾರ ಹಾಗೂ ಕೇಂದ್ರ ರಕ್ಷಣಾ ಸಚಿವಾಲಯದ ಸಹಯೋಗದಲ್ಲಿ ನಡೆಸಲಾಗುತ್ತಿದ್ದು, 2020-21 ನೇ ಸಾಲಿನ 6 ಹಾಗೂ 9ನೇ ತರಗತಿಗಳಿಗೆ ಬಾಲಕರ ಪ್ರವೇಶಕ್ಕೆ ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ.

2019 ರ ಆಗಸ್ಟ್ 5 ರಿಂದ ಸೆಪ್ಟೆಂಬರ್ 23 ರವರೆಗೆ ವೆಬ್‌ಸೈಟ್ sainikschooladmission.in ಮೂಲಕ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಪ್ರವೇಶ ಪರೀಕ್ಷೆ ಮೂಲಕ ಶಾಲೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಪ್ರವೇಶ ಪರೀಕ್ಷೆಯನ್ನು ಜನವರಿ 5, 2020 ರಂದು ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮಂಗಳೂರು, ಮೈಸೂರು, ಬೈಲುಕುಪ್ಪೆ ಹಾಗೂ ಕೊಡಗಿನಲ್ಲಿ ನಡೆಸಲಾಗುವುದು. ಈ ಶಾಲೆಯಲ್ಲಿ ಸಿಬಿಎಸ್‌ಸಿ ಪಠ್ಯಕ್ರಮವಿದ್ದು, ಆಸಕ್ತ ಬಾಲಕರು ಅರ್ಜಿ ಸಲ್ಲಿಸಬಹುದು ಎಂದು ಕೊಡಗು ಸೈನಿಕ ಶಾಲೆ ಪ್ರಕಟಣೆ ತಿಳಿಸಿದೆ.

# Bakery Training

## Bengaluru, August 19  (Karnataka Information)

**Bakery Training Unit, University of Agricultural Sciences, Hebbal, Bangalore – 560 024 has invited application for 14 weeks certificate course in Bakery Technology. Minimum qualification required is Pass/ Fail in SSLC/10th Standard. The applications may be obtained from Bakery Training Unit by paying a fee of Rs.10/- and the completed application may be sent to Co-ordinator, Bakery Training Unit, UAS, Hebbal, Bangalore – 560 024. The last date to issue and receive application is on or before 31.08.2019 at 12.00 noon. Interested candidates can contact Co-ordinator, Bakery Training Unit, UAS, Hebbal, Bangalore – 560 024, personally or through phone 080-23513370  says an official press release.**

# ಬೇಕರಿ ತಂತ್ರಜ್ಞಾನ ತರಬೇತಿ

**ಬೆಂಗಳೂರು, ಆಗಸ್ಟ್ 19 ( ಕರ್ನಾಟಕ ವಾರ್ತೆ ) :**

**ಹದಿನಾಲ್ಕು ವಾರದ ಬೇಕರಿ ಟೆಕ್ನಾಲಜಿ ತರಬೇತಿಗಾಗಿ ಅರ್ಜಿ ಸ್ವಿಕರಿಸಲಾಗುವುದು. ಅಭ್ಯರ್ಥಿಯು ಕನಿಷ್ಟ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿ) ಪಾಸ್/ಫೇಲ್‌ಗಿರಬೇಕು. ನಿಗಧಿತ ಅರ್ಜಿ ಪಾರಂಗಳನ್ನು ರೂಪಾಯಿ 10–00 (ಹತ್ತು) ಸಂದಾಯಿಸಿ, ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು–560024, ಇಲ್ಲಿಂದ ಪಡೆದುಕೊಳ್ಳಬಹುದು. ಅರ್ಜಿಯನ್ನು ಪಡೆಯಲು ಹಾಗೂ ಭರ್ತಿಮಾಡಿದ ಅರ್ಜಿಯನ್ನು ಹಿಂದಿರುಗಿಸಲು ಕೊನೆಯ  ದಿನಾಂಕ 31.08.2019 ರಂದು 12.00 ಘಂಟೆಯ ಒಳಗೆ, ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು–560 024, ಈ ವಿಳಾಸಕ್ಕೆ ತಲುಪಿಸಬೇಕು. ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ ಇವರನ್ನು ಖುದ್ದಾಗಿ ಅಥವಾ ದೂರವಾಣಿಯ ಮೂಲಕ ಸಂಪರ್ಕಿಸಿ 080–23513370.**

## ಎಸಿಬಿ ದಾಳಿ

**ಬೆಂಗಳೂರು, ಆಗಸ್ಟ್ 19 ( ಕರ್ನಾಟಕ ವಾರ್ತೆ ) :**

ತುಮಕೂರು ನಗರ, ಕ್ಯಾತ್ಸಂದ್ರ ನಿವಾಸಿಯೊಬ್ಬರು ತಿಪಟೂರಿನ ಹುಚ್ಚಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ 2-00 ಎಕರೆ ಜಮೀನನ್ನು ಭೂಪರಿವರ್ತನೆ ಮಾಡಿಸಿ, ಒಟ್ಟು 43 ನಿವೇಶನಗಳನ್ನು ವಿಂಗಡಿಸಿ, ನಿವೇಶನಗಳಿಗೆ ಗ್ರಾಮ ಪಂಚಾಯ್ತಿ ಖಾತೆಯನ್ನು ಹೊಂದಿರುತ್ತಾರೆ. ಸದರಿ ನಿವೇಶನಗಳಿಗೆ ಸಂಬಂಧಪಟ್ಟಂತೆ ಖಾತೆಗಳನ್ನು ರದ್ದುಪಡಿಸುವಂತೆ ತಕರಾರು ಅರ್ಜಿಯು ತಾಲ್ಲೂಕು ಪಂಚಾಯ್ತಿಗೆ ಸ್ವೀಕೃತವಾಗಿರುತ್ತದೆ. ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಈ ಬಗ್ಗೆ ದೂರುದಾರರಿಂದ ದಾಖಲೆಗಳನ್ನು ಪಡೆದು, ತಾಲ್ಲೂಕು ಪಂಚಾಯತ್‌ನ ಕಾನೂನು ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟಿರುತ್ತಾರೆ. ಶ್ರೀ.ಬಸಪ್ಪ, ಕಾನೂನು ಸಲಹೆಗಾರರು, ತಾಲ್ಲೂಕು ಪಂಚಾಯತ್, ತಿಪಟೂರು ರವರು ಕಾನೂನು ಅಭಿಪ್ರಾಯ ವರದಿಯನ್ನು ನೀಡಲು ರೂ.2,00,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:09/07/2019 ರಂದು ಶ್ರೀ.ಬಸಪ್ಪ, ಕಾನೂನು ಸಲಹೆಗಾರರು, ತಾಲ್ಲೂಕು ಪಂಚಾಯತ್, ತಿಪಟೂರು ರವರು ದೂರುದಾರರಿಂದ ರೂ.1,00,000/- ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## <u>ಹೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ಮರುಕಲ್ಪಿಸಲು ಬೆಸ್ಕಾಂ ಸಹಾಯ ಹಸ್ತ:</u>

**ಬೆಂಗಳೂರು, ಆಗಸ್ಟ್ 19 ( ಕರ್ನಾಟಕ ವಾರ್ತೆ ) :**

**ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಭಾರಿ ಮಳೆ ಮತ್ತು ನೆರೆಹಾವಳಿಯಿಂದಾಗಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ (ಹೆಸ್ಕಾಂ) ವ್ಯಾಪ್ತಿಯಲ್ಲಿ ಹಾನಿಗೊಳಗಾದ ವಿದ್ಯುತ್ ಮೂಲಭೂತ ಸೌಲಭ್ಯಗಳನ್ನು ತುರ್ತಾಗಿ ಸರಿಪಡಿಸಿ ವಿದ್ಯುತ್ ಸಂಪರ್ಕವನ್ನು ಮರು ಕಲ್ಪಿಸುವ ಕಾರ್ಯಕ್ಕೆ ನೆರವಾಗಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ನೆರವಿನ ಹಸ್ತ ಚಾಚಿದ್ದು, ಈ ನಿಟ್ಟಿನಲ್ಲಿ ನಾಲ್ವರು ಇಂಜಿನಿಯರುಗಳು ಮತ್ತು ಐವತ್ತು ಪವರ್‌ಮೆನ್‌ಗಳ ತಂಡವೊಂದನ್ನು ಇಂದು ಕಳಿಸಿಕೊಟ್ಟಿದೆ.**

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯ ಏಳು ಜಿಲ್ಲೆಗಳಲ್ಲಿ ಹಾನಿಗೊಳಗಾದ ವಿದ್ಯುತ್‌ಕಂಬಗಳು, ತಂತಿಗಳು ಮತ್ತು ಪರಿವರ್ತಕಗಳನ್ನು ತ್ವರಿತವಾಗಿ ದುರಸ್ತಿಗೊಳಿಸಿ ವಿದ್ಯುತ್ ಸರಬರಾಜನ್ನು ಮರುಕಲ್ಪಿಸುವ ಕಾರ್ಯದಲ್ಲಿ ಬೆಸ್ಕಾಂ ಪಡೆ ಕಾರ್ಯನಿರ್ವಹಿಸಲಿದೆ.**

**ಹೆಸ್ಕಾಂ ಸಂಸ್ಥೆಯ ಕೋರಿಕೆಗೆ ಸ್ಪಂದಿಸಿ ಕಳುಹಿಸಲಾಗಿರುವ ಬೆಸ್ಕಾಂ ತಂಡವು ಮುಂದಿನ ಎರಡು ವಾರಗಳ ಕಾಲ ವಿದ್ಯುತ್ ಮೂಲಸೌಲಭ್ಯಗಳ ದುರಷ್ಥಿ ಮತ್ತು ವಿದ್ಯುತ್ ಸಂಪರ್ಕಕಲ್ಪಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದೆ.**

## BESCOM team to restore power supply in HESCOM area:

**Bengaluru, August 19 (Karnataka Information)**

BESCOM has deputed a team consisting of four engineers and 50Power men to rectify the damaged electric supply infrastructure and to restore the power

supply in the flood hit areas coming under the jurisdiction of Hubli Electric Supply Company (HESCOM).

The team which left Bangalore today will take up restoration of power supply in the areas affected during the floods by attending damaged electric poles, lines and fixing transformers.

The team which has been sent in response to the request made by HESCOM will involve in power restoration activities for the next two weeks.